(2) ಹುಬ್ಬಳ್ಳಿಯಲ್ಲಿರತಕ್ಕಂಥ ಅಂಜುಮಾರ್ಗ ಎ.ಇಸ್ಲಾಂ ಸಂಸ್ಥೆ ಕುರಿತು.

+ ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಹುಬ್ಬಳ್ಳಿಯಲ್ಲಿರತಕ್ಕಂಥ ಅಂಜುಮಾನ್ ಎ ಇಸ್ಲಾಂ ಬಹಳ ಪ್ರತಿಷ್ಠಿತವಾದಂತಹ ಸಂಸ್ಥೆಯಾಗಿದೆ. ಬಹಳ ಒಳ್ಳೆಯ ಕೆಲಸಗಳನ್ನು ಅವರು ಮಾಡುತ್ತಾ ಇದ್ದಾರೆ. ಆದರೆ ಅಲ್ಲಿ ಚುನಾವಣೆಯಾಗಬೇಕೆಂದು ಬಹಳ ಸಮಯದಿಂದ ಆ ಭಾಗದ ಜನರ ಅಪೇಕ್ಷೆ ಇದ್ದರೂ ಕೂಡ ಅದು ಮುಂದುವರೆದುಕೊಂಡು ಹೋಗುತ್ತಾ ಇದೆ. ನಿಜವಾಗಿ ಕರ್ನಾಟಕ ಬೋರ್ಡ್ ಆಫ್ ವಕ್ಫ ಒಂದು ಆದೇಶವನ್ನು ಕೂಡ ಕೊಟ್ಟಿದೆ. ಅಂದರೆ 1995ರ ಏಪ್ರಿಲ್ ಮೊದಲು ಈ ಚುನಾವಣೆಯನ್ನು ಮುಗಿಸಬೇಕೆಂದು ಆದೇಶವನ್ನು ಕೊಟ್ಟಿದೆ. ಆ ಆದೇಶದ ಪ್ರಕಾರ ಚುನಾವಣೆಯನ್ನು ಮಾಡಬೇಕೆಂದು ಪ್ರಯತ್ನವನ್ನು ಮಾಡುತ್ತಿರುವಾಗ ಪುನಃ ಅದು ಸರ್ಕಾರಕ್ಕೆ ಒಂದು ಮನವಿಯನ್ನು office bearers of the Anjauman Islam - ಅವರು ಕೊಟ್ಟು ಸರ್ಕಾರವು 8-3-95ರಲ್ಲಿ ಒಂದು ಡೈರೆಕ್ಷನ್ ಕೊಟ್ಟಿತು. ಅದು ಏನೆಂದರೆ ಚುನಾವಣೆಯನ್ನು ನೀವು ಮುಂದುವರೆಸಬೇಕೆಂದು ಕರ್ನಾಟಕ ಸ್ಟೇಟ್ ವಕ್ಫ ಬೋರ್ಡ್‌ಗೆ ಆದೇಶವನ್ನು ಕೊಟ್ಟಿತು. ಅದು ಅದನ್ನು ಮುಂದುವರೆಸಬೇಕೆಂದು ಸರ್ಕಾರಿ ಆಜ್ಞೆಯ ಪ್ರಕಾರ 30-3-95ರ ಅದು ಪೋಸ್ಟಪೋನ್ ಆಯಿತು. ಆಮೇಲೆ ಇದೇ ರೀತಿಯಲ್ಲಿ ಅನೇಕ ಕ್ಯಾಲಂಡರಿ ಇವೆಂಟ್ಸ ಕೂಡ ಪಬ್ಲಿಷ್ ಆಯಿತು. ಒಮ್ಮೆ 7-1-96ಕ್ಕೆ ಮಾಡಬೇಕೆಂದು ಆಯಿತು. ಆದರೆ ಮುನಿಸಿಪಾಲಿಟಿ ಚುನಾವಣೆ ಇದೆಯೆಂದು ಹೇಳಿ ಪುನಃ ದೇಟ್ ಎಲ್ಲಾ ಫಿಕ್ಸ ಆಯಿತು. ಮೆಂಬರ್ ಷಿಫ ಎಲ್ಲಾ ಆಯಿತು. ಪೋಲೀಸ್ ಕಮೀಷನರ್ ಅವರ ಸಲಹೆಯ ಪ್ರಕಾರ ಪುನಃthe election proposed to be held for Anjumae Islam Hubli, be postponed at any date on or after, 1-2-96 ಎಂದು ಆದೇಶವನ್ನು ಕೊಟ್ಟರು. ಅಲ್ಲಿ ಪೋಲೀಸ್ ಕಮೀಷನರ್ ಏನು ಹೇಳುತ್ತಾರೆಂದರೆ ನಾವು ಹೇಳುತ್ತಿವೆ ಧ್ವಜಾರೋಹಣ ಬಹಳ ಸಮಾಧಾನಕರವಾಗಿ ಆಯಿತು ಎಂದು, ಪೋಲೀಸ್ ಕಮೀಷನರ್ ಏನು ಹೇಳುತ್ತಾರೆಂದರೆ in such a senerio elections to the Anjumane Islam will pose serious law and order problem. ಅಂಜುಮಾನ್ ಎ ಇಸ್ಲಾಂ ಎಂಬ ಸಂಸ್ಥೆಯ ಚುನಾವಣೆ ಅವರವರಲ್ಲಿ ಆಗುತ್ತಿರುವಾಗ ಸಿರೀಯಸ್ ಲಾ ಅಂಡ್ ಆರ್ಡರ್ ಪ್ರಾಬ್ಲಂ ಎಂದು ಹೇಳುವ ಆ ಕಮೀಷನರ್ ಯಾರು ಎಂದು ಅರ್ಥವಾಗುತ್ತಾ ಇಲ್ಲ. He is unfit to be there as police Commissioner ಅಂತಹ ಒಬ್ಬ ಪೋಲೀಸ್ ಕಮೀಷನರ್ ಒಂದು ಸಣ್ಣ ಸಂಸ್ಥೆಯ ಚುನಾವಣೆ ಮಾಡಬೇಕೆಂದು ಹೇಳಿದಾಗ ಸಿರೀಯಸ್ ಲಾ ಅಂಡ್ ಆರ್ಡರ್ ಸಿಚ್ಯುಯೇಷನ್ ಎಂದು ಹೇಳಿತಕ್ಕಂಥ ಒಬ್ಬ ಪೋಲೀಸ್ ಕಮೀಷನರ್ ರಕ್ಷಣೆ ಕೊಡಲು ಆಗದೆ ಇರತಕ್ಕಂಥ ಪೋಲೀಸ್ ಆಫೀಸರ್ he is unfit to be the polic officer according to me. ಇದು ಪೋಸ್ಟಪೋನ್ ಆಗುತ್ತಾ ಈಗ ಪುನಃ ಕರ್ನಾಟಕ ಬೋರ್ಡಆಫ್ ವಕ್ಫ ಆಜ್ಞೆಯ ಪ್ರಕಾರ 20-2-96ಕ್ಕೆ ಚುನಾವಣೆಯನ್ನು ಮಾಡಬೇಕೆಂದು ಹೇಳಿದೆ. Before 10th of March, 1996,ಎಂದು ಇತ್ತೀಚೆಗೆ ಆರ್ಡರ್ ಅನ್ನು ಕೊಟ್ಟಿದ್ದಾರೆ. ಕರ್ನಾಟಕ ವಕ್ಫ ಬೋರ್ಡನಲ್ಲಾಗಲಿ ಅಥವಾ ಅಂಜುಮಾನ್ ಎ ಇಸ್ಲಾಂ ಸಂಸ್ಥೆಯಾಗಲಿ ಈ ಸಂಸ್ಥೆಗಳ ಚುನಾವಣೆಯಲ್ಲಿ ಸರ್ಕಾರ ಹಸ್ತಕ್ಷೇಪ ಯಾವ ಸಂದರ್ಭದಲ್ಲೂ ಮಾಡುವುದು ಸರಿಯಲ್ಲ. ಅದನ್ನು ಆ ಸಂಸ್ಥೆಗಳಿಗೆ ಬಿಟ್ಟು

ಕೊಡಬೇಕು. ಆದರೆ ಸರ್ಕಾರ ಇದನ್ನು ಆಗಾಗ ಈ ರೀತಿ ಮಾಡುವಂಥಾದ್ದು ಏಕೆಂಬುದನ್ನು ಹೇಳುತ್ತೇನೆ. I must say the President of your Janata Dal, visits there and next day, ಮುಂದಿನ ದಿನಕ್ಕೆ ಪೋಸ್ಟ್ ಪೋನ್ ಆಗುತ್ತದೆ. ಇದನ್ನು ಏಕೆ ಮಾಡಬೇಕು? ಏಕೆ ಹಸ್ತಕ್ಷೇಪ ಮಾಡಬೇಕು. ಇದು ಇದಕ್ಕೆ ಮಾತ್ರ ಸೀಮಿತವಾಗಿಲ್ಲ. ಅಲ್ಲಿಯೇ ಅಲ್ಪಸಂಖ್ಯಾತರ ಅಜಾದ್ ಬ್ಯಾಂಕ್ ಎಂದು ಇದೆ. ಆದರ ಚುನಾವಣೆಯನ್ನೂ ಕೂಡ ಪೋಸ್ಟ್ ಪೋನ್ ಮಾಡಿದರು. ಅದಕ್ಕೆ ಹೈಕೋರ್ಟಿನಲ್ಲಿ, ಆ ಆರ್ಡರ್ ಅನ್ನು ಸ್ಟೇ ಮಾಡಿದರು. ಆಮೇಲೆ ಅದರ ಚುನಾವಣೆಯಾಯಿತು. ಇದು ಒಂದು ನಿದರ್ಶನ, ಅನೇಕ ಕಡೆ ಸರ್ಕಾರ ಹಸ್ತಕ್ಷೇಪ ಮಾಡುವಂತಹ ಪ್ರಶ್ನೆಯೇ ಇಲ್ಲ. ಆದರೆ ಈಗ ಮತ್ತೆ ಪೋಸ್ಟ-ಪೋನ್ ಮಾಡುವಂತಹ ಸನ್ನಾಹ ನಡೆಯುತ್ತಿದೆ, ಇವತ್ತು ಅಥವಾ ನಾಳೆ ಪೋಸ್ಟ-ಪೋನ್ ಆಗುವುದೆಂದು ಅಧಿಕೃತ ಮಾಹಿತಿ ನಮಗೆ ಬಂದಿದೆ. ಆದುದರಿಂದ ಸರ್ಕಾರದಿಂದ ನಮಗೆ ಎರಡು ಆಶ್ವಾಸನೆಗಳು ಬೇಕು. abusing the police power... ಅದನ್ನೂ ಕೂಡ ಮಾಡುವಂಥ ಕ್ರಮ ಇಲ್ಲಿಗೆ ಹೊರತಾಗಬೇಕು. ಆದುದರಿಂದ ದಯಮಾಡಿ ದಿ|| 10-3-96 ರಂದು ಚುನಾವಣೆ ಮಾಡಿಸುತ್ತೇವೆಂಬ ಆಶ್ವಾಸನೆಯನ್ನು ಸರ್ಕಾರದಿಂದ ಕೊಡಬೇಕು. ಎರಡನೆಯದಾಗಿ ಇಂತಹ ಸಂಸ್ಥೆಯ ಚುನಾವಣೆಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದಿಲ್ಲವೆಂಬ ಈ ಎರಡು ಆಶ್ವಾಸನೆಗಳನ್ನು ಸರ್ಕಾರದಿಂದ ನಿರೀಕ್ಷೆ ಮಾಡುತ್ತೇನೆ. ಇದು ಒಳ್ಳೆಯ ಲಕ್ಷಣವಲ್ಲ, ಒಂದೊಂದು ಜಾತಿ, ಮತಗಳ ಜನರನ್ನು ವಿಂಗಡಿಸುವಂಥಾದ್ದು ಒಡೆಯುವಂಥ ನೀತಿ ಏನು ಇದೆ, divide and rule policy of this Government must be halted.. ದಯಮಾಡಿ ಈ ಬಗ್ಗೆ ಕೂಡಲೇ ಉತ್ತರ ಕೊಡಲು ಸಿದ್ದವಿದ್ದರೆ ಕೊಡಿ, ಇಲ್ಲದಿದ್ದರೆ ಮಾಹಿತಿ ಕಲೆಕ್ಟ ಮಾಡಿ ಕೊಡಿ.

ಶ್ರೀ ಜೆ.ಹೆಚ್. ಪಟೇಲ್ : ಕಲೆಕ್ಟ ಮಾಡಿದ್ದೇವೆ. ಡಿವೈಡ್ ಅಂಡ್ ರೂಲ್ ಈ ಸರ್ಕಾರದ ಪಾಲಿಸಿ ಎನ್ನುತ್ತಾರಲ್ಲಾ, I totally deny. Whatever has been done during his time it is yielding results. We have been able to contain it. That is a different matter. ಈಗ ಸನ್ಯಾಸ್ಯ ವೀರಪ್ಪಮೋಯಿಲಿಯವರು ಏನು ಹೇಳಿದ್ದಾರೆ. ಇದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು, ಅದನ್ನು ನಾನು ಒಪ್ಪುತ್ತೇನೆ. ಅದು ಯಾವುದೇ ಧಾರ್ಮಿಕ ಸಂಸ್ಥೆಗಳೇ ಇರಲಿ, ವಕ್ಫ ಇರಲಿ, ಅಥವಾ ಒಕ್ಕಲಿಗರ ಸಂಘವಾಗಲಿ ಅಥವಾ ವೀರಶೈವ ಮಹಾ ಸಭಾ ಇರಲಿ ಅವರವರಿಗೆ ಬೇಕಾದವರನ್ನು ಆರಿಸಿಕೊಳ್ಳಬೇಕಾಗಿದೆ. ಇದರಲ್ಲಿ ನಾವು ಕೈ ಹಾಕುವುದಿಲ್ಲ.

ಅಧ್ಯಕ್ಷರು : ಮಾನ್ಯ ಜಗದೀಶ ಶೆಟ್ಟರರವರೇ ಹಾಗೂ ಅಶೋಕ್ ಕಾಟ್ಟೆಯವರೇ, ಇದರ ಬಗ್ಗೆ ಚರ್ಚೆಗೆ ಅವಕಾಶವಿಲ್ಲ. ಇದನ್ನು ಶೂನ್ಯ ವೇಳೆಯಲ್ಲಿ ಸನ್ಯಾಸ್ಯ ಹಿರಿಯ ಸದಸ್ಯರಾದಂತಹ ವೀರಪ್ಪಮೊಯಿಲಿಯವರು ಪೂರ್ವಾನುಮತಿಯನ್ನು ಕೇಳಿ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಚರ್ಚೆ ಬೇಡ, ಆ ರೀತಿಯಾದರೆ ಬೇರೆಯದಕ್ಕೂ ಅವಕಾಶವನ್ನು ಕೊಡಬೇಕಾಗುತ್ತದೆ. ಆದುದರಿಂದ ಈ ಹೊಸ ಸಂಪ್ರದಾಯ ಆಗುತ್ತದೆ. ಹಾಗೆ ಮಾಡುವುದಕ್ಕೆ ಬರುವುದಿಲ್ಲ. ಅವರು ಸುದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ. ಇದಕ್ಕೆ ಮಾನ್ಯ ಮಂತ್ರಿಯವರು ಉತ್ತರವನ್ನು ಹೇಳಿದರೆ ಸಾಕು.

ಶ್ರೀ ಜಗದೀಶ್ ಶೆಟ್ಟರ್ : ಇವರು ವ್ಯಕ್ತಿಗಳ ಹಿತಾಸಕ್ತಿ ಸಲುವಾಗಿ ಮುಂದೂಡುತ್ತಿದ್ದಾರೆ. ಆದುದರಿಂದ ದಯಮಾಡಿ ಇಂತಹ ಚುನಾವಣೆಗಳಲ್ಲಿ ಯಾವುದೇ ರಾಜಕೀಯವಿರಬಾರದು, ತಕ್ಷಣ ಚುನಾವಣೆಯನ್ನು ಮಾಡಬೇಕು.

ಶ್ರೀ ಆರ್. ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೇ, ಇಂತಹ ಚುನಾವಣೆಯಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವುದು ಬಹಳ ದೊಡ್ಡ ತಪ್ಪು. ಅದನ್ನು ನಾವು ಒಪ್ಪಿಕೊಳ್ಳುತ್ತೇವೆ. ಈ ರೀತಿಯಾಗಿ ಏನಾದರೂ ಆಗಿದ್ದರೆ ಅದನ್ನು ಸರಿಮಾಡಲು ಪ್ರಯತ್ನ ಮಾಡುತ್ತೇನೆ. ಪೋಲೀಸ್ ಎಸ್.ಪಿ. ಯಾಗಲಿ ಕಮೀಷನರ್ ಆಗಲಿ ಅಂತಹ ಕೇಸಗಳು ಇಲ್ಲದಿದ್ದರೂ ಕೂಡ ತಮಗೆ ಜ್ಞಾಪಕವಿರಬಹುದು. ಶ್ರೀನಿವಾಸಪುರದಲ್ಲಿ ಚುನಾವಣೆಗೆ ಎಲ್ಲಾ ಸಿದ್ದತೆಯನ್ನು ಮಾಡಿಕೊಂಡಿರುವಾಗ ಎಸ್.ಪಿ. ಅವರನ್ನು ಕಳುಹಿಸಿದರು. ಲಾ ಅಂಡ್ ಆರ್ಡರ್ ಪ್ರಾಬ್ಲಂ ಬಂದು ಬಿಡುತ್ತದೆ ಎಂದು ಇದು ಒಂದೂವರೆ, ಎರಡುವರ್ಷಗಳ ಹಿಂದೆ ನಡೆದಂಥಾದ್ದು. it was not necessary. ಅದು ಸುಮ್ಮನೆ, ಯಾವಾಗ ಚುನಾವಣೆಯನ್ನು ಮಾಡುವುದಕ್ಕೆ ಇಷ್ಟವಿರುವುದಿಲ್ಲ ಆಗ ಅವರ ಕೈಯಲ್ಲಿ ಬರೆಸಿಕೊಂಡು ಬರುವುದು ಇದು ಒಳ್ಳೆಯದಲ್ಲ. ಅದನ್ನು ಯಾರೇಮಾಡಲಿ ಅವರಾದರೂ ಮಾಡಲಿ, ನಾವಾದರೂ ಮಾಡಲಿ ಅದಕ್ಕೆ ಒಂದು ತಡೆಯಾಬೇಕಾಗುತ್ತದೆ. ಅದನ್ನು ನಾವು ಪ್ರಯತ್ನ ಮಾಡಿ ತಡೆಯಾಕುತ್ತೇವೆ.

ಅಧ್ಯಕ್ಷರು : ಆಫೀಸರ್ಸ್ ಎಲ್ಲಾ ಮಾಡುತ್ತಾರೆ. That was not a President's election where 15 members should sit together and choose the President.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರು ತಮ್ಮ ಮುಖಾಂತರ ಗಮನ ಸೆಳೆಯುವ ಸೂಚನೆಗೆ ಕೊಡುವಾಗ ನಾನೂ ಕೂಡ ದಸ್ಕತ್ತು ಹಾಕಿ ಅವಕಾಶವನ್ನು ಕೇಳಿದ್ದೆನು. ಅವರು ಗಮನ ಸೆಳೆಯುವ ಸೂಚನೆಯ ಸಂದರ್ಭದಲ್ಲಿ ಬರಲು ಸಾಧ್ಯವಾಗಲಿಲ್ಲ. ನಮಗೆ ಉತ್ತರವನ್ನು ಕೊಟ್ಟರು. ಈಗ ಮೊನ್ನೆ ಸರ್ಕಾರದಿಂದ ಕೂಡ ಉತ್ತರವನ್ನು ಕೊಟ್ಟಿದ್ದರು. ಇದಕ್ಕೆ ವಿಳಂಬವಾಗುವುದಕ್ಕೆ ಕಾರಣವೇನು ಎಂದು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲು ಅವಕಾಶವನ್ನು ಕೊಡದಿದ್ದರೆ ನಾನು ಏನು ಮಾಡಬೇಕು?

ಅಧ್ಯಕ್ಷರು : ನಿಯಮಾವಳಿಯು ಪ್ರಕಾರ ನಾನು ಅವಕಾಶವನ್ನು ಕೊಡಬೇಕು. ಈಗ ನಾವು ಶೂನ್ಯ ವೇಳೆಯಲ್ಲಿದ್ದೇವೆ. ಈಗ ನಾನು ಶೂನ್ಯ ವೇಳೆಯಲ್ಲಿದ್ದೇವೆ. ಈಗ ನಾನು ಮಾನ್ಯ ವಿರೋಧಪಕ್ಷದವರನ್ನು ಮಾತನಾಡಲು ಕರೆದಿದ್ದೇನೆ.

(3) ಚಾಮರಾಜನಗರದಲ್ಲಿ ದಿನಾಂಕ 21.02.96 ರಂದು ನಡೆದ ಘಟನೆ ಬಗ್ಗೆ

+ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಅತ್ಯಂತ ಗಂಭೀರವಾದದಂಥ ವಿಷಯವನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಚಾಮರಾಜನಗರದಲ್ಲಿ 21.02.96ರಂದು ಈ ರಂಜಾನ್ ಹಬ್ಬವನ್ನು ಮಾಡಿಕೊಂಡು ವಾಪಸ್ಸು ಹೋಗುವಂಥ ಸಂದರ್ಭದಲ್ಲಿ ನಮ್ಮ ಮುಸ್ಲೀಂ ಬಂಧುಗಳು ಕೆಲವರು ಅಪರೂಪಕ್ಕೆ ಆ ಕೆಡ ಈ ಕಡೆ